ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	640
ಸದಸ್ಯರ ಹೆಸರು	ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ವಿಷಯ	ಹಿರಿಯ ನಾಗರೀಕರಿಗೆ ನೀಡುತ್ತಿರುವ ಪಿಂಚಣಿ ಬಗ್ಗೆ.
ಉತ್ತರಿಸಬೇಕಾದ ದಿನಾಂಕ	05.03.2021
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಪ್ರಶ್ನೆ	ಉತ್ತರ
ಅ) 2020-2021 ನೇ ಸಾಲಿನಲ್ಲಿ ಹೊಸದಾಗಿ ಹಿರಿಯ ನಾಗರಿಕ ಪಿಂಚಣಿದಾರರ ಸಂಖ್ಯೆ ಎಷ್ಟು;	2020-2021 ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾತಿ ನೀಡಲಾದ ಹಿರಿಯ ನಾಗರಿಕ ಪಿಂಚಣಿದಾರರ ಸಂಖ್ಯೆ. 1. ವೃದ್ಧಾಪ್ಯ ವೇತನ-1,46,734 2. ಸಂಧ್ಯಾ ಸುರಕ್ಷಾ ಯೋಜನೆ-2,00,096
ಆ) ಪಿಂಚಣಿದಾರರಿಗೆ ಸರಿಯಾಗಿ ಪಿಂಚಣಿ ಹಣ ಸಿಗುತ್ತಿಲ್ಲ ಎಂಬ ಆರೋಪವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇ) ಬಂದಿದ್ದಲ್ಲಿ, ಈ ಕುರಿತು ತನಿಖೆ ನಡೆದಿದೆಯೇ, ಇದಕ್ಕೆ ಸೂಕ್ತ ಕಾರಣ ನೀಡುವುದು;	ರಾಜ್ಯದಲ್ಲಿ ಜಾರಿಯಲ್ಲಿರುವ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಿಕ ಪಿಂಚಣಿ ವಿತರಣಾ ವ್ಯವಸ್ಥೆಯನ್ನು ಸಮರ್ಪಕವಾಗಿ ಹಾಗೂ ಪಾರದರ್ಶಕವಾಗಿ ನಿರ್ವಹಿಸುವಲ್ಲಿ ಖಜಾನೆ-2 ಯೋಜನೆಯನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಗಿದೆ. ಖಜಾನೆ-2 ಯೋಜನೆಯು ಸುಭದ್ರ, ಪಾರದರ್ಶಕ ಹಾಗೂ ನಿಖರ ವ್ಯವಸ್ಥೆಯಾಗಿರುವ ಹಿನ್ನೆಲೆಯಲ್ಲಿ ಖಜಾನೆ-1 ವ್ಯವಸ್ಥೆಯನ್ನು ಜನವರಿ-2020 ರಿಂದ ಸಂಪೂರ್ಣವಾಗಿ ಸ್ಥಗಿತಗೊಳಿಸಿ, ಈ ವ್ಯವಸ್ಥೆಯಡಿ ಪಿಂಚಣಿ ಪಡೆಯುತ್ತಿದ್ದ ಫಲಾನುಭವಿಗಳ ಮಾಹಿತಿಯನ್ನು ಸಹ ಕಡ್ಡಾಯ ವಿವರಗಳೊಂದಿಗೆ ಅನುಕಲನೆ ಮೂಲಕ ಖಜಾನೆ-2 ತಂತ್ರಾಂಶಕ್ಕೆ ವರ್ಗಾಯಿಸಲಾಗುತ್ತಿದೆ. ಅಗತ್ಯ ಮಾಹಿತಿ ಲಭ್ಯವಾಗದ ಪ್ರಕರಣಗಳಲ್ಲಿ ಪಿಂಚಣಿ ವ್ಯತ್ಯಯವಾಗಿದ್ದು, ಈ ಪ್ರಕರಣಗಳನ್ನು ಕಡ್ಡಾಯವಾಗಿ ಭೌತಿಕ ಪರಿಶೀಲನೆಗೆ ಒಳಪಡಿಸಿ, ಮಾಹಿತಿ ಸಂಗ್ರಹಣೆಯೊಂದಿಗೆ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ಫಲಾನುಭವಿಗಳ ಬ್ಯಾಂಕ್ ಖಾತೆ ವಿವರ/ IFSC CODE / PINCODE ಮಾಹಿತಿಯನ್ನು ನಿಖರವಾಗಿ ನೀಡದೆ ಇರುವ ಕಾರಣ NO SUCH ACCOUNT/ INVALID BANK DETAILS ಮತ್ತು INVALID ADDRESS ಕಾರಣದಿಂದ ಪಿಂಚಣಿ ಸ್ಥಗಿತಗೊಂಡಿದ್ದು, ಈ ಬಗ್ಗೆ ಪರಿಶೀಲಿಸಿ ಬ್ಯಾಂಕ್ ಖಾತೆ ವಿವರ ಹಾಗೂ ವಿಳಾಸ ನ್ಯೂನತೆಯನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಫಲಾನುಭವಿಗಳು ಅಗತ್ಯ ಮಾಹಿತಿ ನೀಡಿದಲ್ಲಿ ನ್ಯೂನತೆಯನ್ನು ಸರಿಪಡಿಸಿ ತಂತ್ರಾಂಶದಲ್ಲಿ ಅಳವಡಿಸಿ ತಹಸೀಲ್ದಾರರು ಅನುಮೋದನೆ ನೀಡಿದ ನಂತರ ಸರಿಪಡಿಸಲಾದ ಮಾಹಿತಿಯನ್ನು ಖಜಾನೆಗೆ ಅನುಕಲನೆ ಮೂಲಕ ವರ್ಗಾಯಿಸಿ ತ್ವರಿತವಾಗಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ.

ಈ)ಹಿರಿಯ ನಾಗರಿಕರ ಪಿಂಚಣಿದಾರರ ಪಟ್ಟಿ ಪರಿಷ್ಕರಣೆ ಹೊಂದಿದೆಯೇ; ಹೊಸ ಸೇರ್ಪಡೆಗಳ ಸಂಖ್ಯೆ ಎಷ್ಟು ಮತ್ತು ಕಾರಣಾಂತರಗಳಿಂದ ಹೊರಗಿಡಲಾಗಿರುವ ಪಟ್ಟಿಗಳ ಸಂಖ್ಯೆ ಎಷ್ಟು?	ಹಾಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಪಟ್ಟಿ ನಿರಂತರವಾಗಿ ಪರಿಷ್ಕರಣೆ ಹೊಂದುವುದು ಸಹಜ ಪ್ರಕ್ರಿಯೆಯಾಗಿದ್ದು, ಮರಣ ಹೊಂದಿದ / ಶಾಶ್ವತ ವಲಸೆ ಹಾಗೂ ಅನರ್ಹ ಫಲಾನುಭವಿಗಳ ಪಿಂಚಣಿಯನ್ನು ರದ್ದು ಪಡಿಸಲಾಗುತ್ತದೆ. ಅದೇ ರೀತ್ಯಾ ಹೊಸ ಅರ್ಹ ಫಲಾನುಭವಿಗಳನ್ನು ಗುರುತಿಸಿ ಮಂಜೂರಾತಿ ಮಾಡುವ ಪ್ರಕ್ರಿಯೆ ಸಹ ನಿರಂತರವಾಗಿ ಕೈಗೊಳ್ಳಲಾಗುತ್ತಿದೆ. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆಗಳಡಿ 2020-21 ನೇ ಸಾಲಿನಲ್ಲಿ ಈವರೆವಿಗೆ 1.22 ಲಕ್ಷ ಪ್ರಕರಣಗಳನ್ನು ಮರಣ/ ಶಾಶ್ವತ ವಲಸೆ ಕಾರಣದಿಂದ ರದ್ದುಪಡಿಸಿ ಹಾಗೂ 3.47 ಲಕ್ಷ ಹೊಸ ಅರ್ಹರಿಗೆ ಪಿಂಚಣಿ ಮಂಜೂರು ಮಾಡಲಾಗಿದೆ. ಹಾಗೂ ಒಟ್ಟಾರೆ ಪ್ರಸ್ತುತ 40.07 ಲಕ್ಷ ಹಿರಿಯ ನಾಗರೀಕರು ಮಾಸಿಕ ಪಿಂಚಣಿ ಸೌಲಭ್ಯ ಪಡೆಯುತ್ತಿದ್ದಾರೆ.

ಸಂಖ್ಯೆ : ಡಿಎಸ್ಎಸ್‌ಪಿ - ಎಲ್ ಸಿ ಎ/5/2021

[ಆರ್. ಅಶೋಕ]
ಕಂದಾಯ ಸಚಿವರು